# ಅ.ನ.ಕೃ.

ತಮ್ಮ ಪುಸ್ತಕಗಳು ಹೇಗೆ ಮುದ್ರಣ ಆಗುತ್ತವೆ ಎನ್ನುವ ಕಾಳಜಿ ಅ.ನ.ಕೃ. ಅವರಿಗೆ ಬೇಕಿಲ್ಲ. ತಾವು ಕಾದಂಬರಿಯನ್ನು ಬರೆದು ಮುಗಿಸಿದರೆ ಮುಗಿಯಿತು. ಪ್ರಕಾಶಕರು ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಇಂಥ ಧೋರಣೆ ಅವರಿಗೆ.

ಮೈಸೂರಿನ ಎಲ್ಲ ಪ್ರಕಾಶಕರೂ ತಪ್ಪಿಲ್ಲದೆ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಹೊರತರುವವರು. ಆದರೆ ಅಲ್ಲಿ ಪ್ರೆಸ್ಸುಗಳ ಕೊರತೆ.


ಹೀಗಾಗಿ ಒಬ್ಬ ಒಳ್ಳೆಯ ಕಂಪಾಸಿಟರ್, ತಾನು ಕೆಲಸ ಮಾಡುತ್ತ ಇದ್ದ ದೊಡ್ಡ ಪ್ರೆಸ್ಸನ್ನು ಬಿಟ್ಟು, ಒಂದಿಷ್ಟು ಅಚ್ಚಿನ ಮೊಳೆಗಳನ್ನು ಹಾಕಿಕೊಂಡು, ತಾನೇ ಒಂದು ಪ್ರೆಸ್ ಆರಂಭಿಸಿದ. ಮುದ್ರಣ ಯಂತ್ರ ಇಲ್ಲ. ಬರಿಯ ಕಂಪೋಸಿಂಗ್. ಮುದ್ರಣ ಮಾಡಿಸುವುದು ಬೇರೆ ಕಡೆ.

ಇವರಿಗೆ ಕೆಲಸಗಳನ್ನು ಕೊಡುವ ಪ್ರಕಾಶಕರಿಗೆ, ಇವರು ತಪ್ಪಿಲ್ಲದೆ, ಯಾರನ್ನೂ ಕೆಲಸಕ್ಕೆ ಇಟ್ಟುಕೊಳ್ಳದೆ, ಬರಿಯ ಒಬ್ಬ ಕಂಪಾಸಿಟರಾಗಿ, ಮುದ್ರಣ ಮುಗಿಸುವುದು ಹೇಗೆ ಎಂದು ಶಂಕೆ. ಹಾಗಾಗಿ ಪ್ರಶ್ನೆ.

'ಪ್ರೂಫ್ ಇತ್ಯಾದಿ ಜವಾಬ್ದಾರಿಗಳನ್ನು ಯಾರು ನೋಡಿಕೊಳ್ಳುತ್ತಾರೆ?'

'ಶೇಷನಾರಾಯಣ ನೋಡಿಕೊಳ್ತಾನೆ, ಸಾರ್.' ಆಗ ಎಲ್ಲರಿಗೂ ತೃಪ್ತಿ.

ಹೀಗಾಗಿ ಅನೇಕರ ಹಸ್ತಪ್ರತಿಗಳನ್ನೂ ಮರುಮುದ್ರಣಗಳನ್ನೂ ಓದಿ ಓದಿ ಪ್ರೂಫ್ ನೋಡಿ ನೋಡಿ ಬಾಯಿಪಾಠ ಮಾಡುವ ಕೆಲಸ ನನಗೆ. ಅ.ನ.ಕೃ. ಅವರ ನಾಲ್ಕು ಕಾದಂಬರಿಗಳ ಮುದ್ರಣ ಕೆಲಸದ ಜವಾಬ್ದಾರಿ ಈಗ ನನ್ನ ಪಾಲಿಗೆ ಬಂತು.



ಡಿ.ವಿ.ಜಿ.ಯವರನ್ನು ನೋಡಲು ಕಾವ್ಯಾಲಯದ ಕೆಲಸವಾಗಿ ಈಗ ಬೆಂಗಳೂರಿಗೆ ಬಂದಾಗ, ಅ.ನ.ಕೃ. ಅವರನ್ನೂ ನೋಡಿ ಹೋಗೋಣ ಎಂದು ಅವರ ಮನೆಗೆ ಹೋದೆ.

ಅ.ನ.ಕೃ. ಅವರು ನನಗೆ ಚೆನ್ನಾಗಿ ಪರಿಚಿತರು. ಇದಕ್ಕೆ ಮೊದಲೂ ನಾನು ಬೆಂಗಳೂರಿನಲ್ಲಿಯೇ ಇದ್ದಾಗ, ಆಗಾಗ್ಗೆ ಅವರ ಮನೆಗೆ ಹೋಗುತ್ತ ಇದ್ದೆ. ಈಗ ನಾನು ಹೇಳಿದೆ:

'ಸಾರ್, ನಿಮ್ಮ ನಾಲ್ಕು ಕಾದಂಬರಿಗಳ ಮರುಮುದ್ರಣದ ಕೆಲಸ ನಾನೇ ನೋಡಿಕೊಳ್ತಾ ಇದೀನಿ.'

'ಹೌದಾ? ತುಂಬಾ ಸಂತೋಷ.'

ಮತ್ತೆ ನಾನು ಮೈಸೂರನ್ನು ಬಿಟ್ಟು, ಬೆಂಗಳೂರಿಗೆ ಬಂದು, ಕನ್ನಡ ಸಾಹಿತ್ಯ ಪರಿಷತ್ತಿಗೆ ಸೇರಿಕೊಂಡಾಗ, ಯಥಾಪ್ರಕಾರ ಅವರ ಮನೆಗೆ ಹೋಗುತ್ತ ಇದ್ದೆ. ಪರಿಷತ್ತಿನ ಪ್ರೆಸ್ಸಿನಲ್ಲಿಯೂ ಅವರ ಒಂದು ಕಾದಂಬರಿಯನ್ನು ಮುದ್ರಣ ಮಾಡಿದೆ.

ಆಗ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಜಿ. ನಾರಾಯಣ– ಶಿವಮೂರ್ತಿ ಶಾಸ್ತ್ರಿಗಳು ಅಭ್ಯರ್ಥಿಗಳಾಗಿದ್ದರು.

'ಆ ಶಾಸ್ತ್ರಿಗಳನ್ನು ಹೇಗಾದರೂ ಮಾಡಿ ಸೋಲಿಸಿ' ಎಂದು ಅ.ನ.ಕೃ. ನಮ್ಮೊಂದಿಗೆ ಹೇಳುತ್ತ ಇದ್ದರು.